ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 1069/2021

ಸಿ ಡಬ್ಲ್ಯೂ-2

ಪಿ ಡಬ್ಲ್ಯೂ- 2

ದಿಃ 07-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಪ್ರಶಾಂತ್ ಈಶ್ವರ್ ನಾಯಕ |
| ತಂದೆಯ ಹೆಸರುಃ | ಈಶ್ವರ್ ನಾಯಕ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಚಾಲಕ |
| ವಿಳಾಸಃ | ಪಳ್ಳಿಕೇರಿ |

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

ಚಾಸಾ-3 ರವರ ಪರಿಚಯ ಇರುತ್ತದೆ. ದಿ 31-07-2021 ರಂದು ಹಾರವಾಡ ಕ್ರಾಸ್ ಹತ್ತಿರ ಪಂಚನಾಮೆಗೆ ಸಹಿಯನ್ನು ಮಾಡಿರುತ್ತೇನೆ. ಅಪಘಾತದ ವಿಷಯಕ್ಕಾಗಿ ಪಂಚನಾಮೆಯ ಮೇಲೆ ಸಹಿಯನ್ನು ಮಾಡಿರುತ್ತೇನೆ. ಚಾಸಾ-1 ಮತ್ತು 3 ರವರು ಸಹ ಇರುತ್ತಾರೆ. ಸ್ಥಳ ಪಂಚನಾಮೆ ಹಾಗೂ ಅಪಘಾತಕ್ಕೆ ಒಳಪಟ್ಟ ವಾಹನದ ಪಂಚನಾಮೆಯನ್ನು ಮಾಡಲಾಯಿತು. ನಿಶಾನೆ ಪಿ2 ರ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಅದನ್ನು ನಿಶಾನೆ ಪಿ2 ಬಿ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಬೆಳ್ಳಿಗೆ 07.00 ರಿಂದ 08.30 ರ ತನಕ ಮಾಡಿರುತ್ತಾರೆ. ವಾಹನದ ಫೋಟೊಗಳನ್ನು ತೆಗೆದಿರುತ್ತಾರೆ. ಮತ್ತೆ ಏನು ಮಾಡಿರುವುದಿಲ್ಲ. ನಿಪಿ4 ಮತ್ತು 5 ರ ಫೋಟೊಗಳನ್ನು ಗುರುತಿಸುತ್ತಾರೆ. ಸಾಕ್ಷಿಗೆ 2 ಫೋಟೊಗಳನ್ನು ತೋರಿಸಲಾಗಿ ಅದರಲ್ಲಿ ತಾವು ಇರುವುದನ್ನು ಗುರುತಿಸಿದ್ದು, ಫೋಟೋಗಳನ್ನು ನಿಪಿ6 ಮತ್ತು 7 ಎಂದು ಪುರಾವೆಗೆ ಒಳಪಟ್ಟು ಗುರುತಿಸಲಾಯಿತು. ಮತ್ತೆ ಏನು ಮಾಡಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದ್ದು, ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶ ಪ್ರತಿಕೂಲ ಸಾಕ್ಷಿಯೆಂದು ಪರಿಟಣಿಸಿದ್ದು, ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿಸಲಾಯಿತು.)

ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದ

ಪಂಚನಾಮೆಯ ಜೊತೆಗೆ ಅಪಘಾತ ಸ್ಥಳದ ನಕಾಶೆಯನ್ನು ಸಹ ತಯಾರಿಸಿದರು ಎಂದರೆ ಸರಿ. ನಿಪಿ3 ನಕಾಶೆಯ ಮೇಲಿರು ಇರುವ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಅದನ್ನು ನಿಪಿ3 ಬಿ ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರಪರ ವಕೀಲರಾದ ಶ್ರೀ. ವಿ.ವಿ.ಎಸ್. ರವರಿಂದ

ಪಂಚನಾಮೆಗೆ ಯಾರು ಕರೆದಿದ್ದರು ಎಂಬುದಕ್ಕೆ ಸಾಕ್ಷಿಯು ನಾನು ಅಲ್ಲಿಯೇ ನಿಂತಿರುತ್ತೇನೆ ಎಂದು ನುಡಿಯುತ್ತಾರೆ. ಪೊಲೀಸರು ನನ್ನನ್ನು ಕರೆದಿರುತ್ತಾರೆ. ನಾನು ಸುಮಾರು 07.00 ಘಂಟೆಯ ಸಮಯದಲ್ಲಿ ಘಟನಾ ಸ್ಥಳದಲ್ಲಿ ಇರುತ್ತೇನೆ. ನಾನು ಆ ಸಮಯದಲ್ಲಿ ನನ್ನ ರಿಕ್ಷಾದಲ್ಲಿ ಬರುತ್ತಿದೆ. ನನ್ನ ಹತ್ತಿರ ಪರವಾನಿಗೆ ಇರುತ್ತದೆ. ನಾನು ಪೊಲೀಸರ ಮುಂದೆ ಚಾಲಕ ಎಂದು ಹೇಳಿರುತ್ತೇನೆ. ನನ್ನ ಊರು ಪಳ್ಳಿಕೇರಿ ಎಂದು ಹೇಳಿರುತ್ತೇನೆ. ಪಳ್ಳಿಕೇರಿಯು ಹಾರವಾಡ ಕ್ರಾಸ್ ನಿಂದ ಸುಮಾರು 15 ಕಿ.ಮಿ. ಆಗುತ್ತದೆ. ಪಂಚನಾಮೆಗೆ ಸಹಿ ಮಾಡಿದ್ದೇನೆ ಎನ್ನುವ ಸಮಯದಲ್ಲಿ ಸುಮಾರು 10-15 ಜನರು ಸೇರಿದರು. ಪಂಚನಾಮೆಯನ್ನು ಪೊಲೀಸರು ಬರೆದಿರುತ್ತಾರೆ. ನಾನು ಇದೇ ರೀತಿ ಬರೆಯಿರಿ ಎಂದು ಹೇಳಿರುವುದಿಲ್ಲ. ಆ ಸ್ಥಳದಲ್ಲಿ ಹೆಲ್ಮೆಟ್ ಇದ್ದುದರ ಬಗ್ಗೆ ಗಮನಿಸಿರುವುದಿಲ್ಲ. ನಾನು ನಕಾಶೆಯನ್ನು ಈ ರೀತಿ ಬಿಡಿಸಿ ಎಂದು ಹೇಳಿರುವುದಿಲ್ಲ. ನಿಶಾನೆ ಪಿ4 ರಲ್ಲಿ ಡಿವೈಡರ್ ಇದ್ದಲ್ಲಿ ಯು ಟರ್ನ್ ಗೆ ಹೊಂದಿಕೊಂಡು STOP ಅಂತ ಬರೆದಿರುತ್ತದೆ ಎಂದರೆ ಸರಿ. ಅದರ ಅರ್ಥ ಅಲ್ಲಿ ನಿಲ್ಲಿಸಬೇಕು ಎನ್ನುತ್ತದೆ. ಆದ್ದರಿಂದ STOP ಅಂತ ಇದ್ದುದರಿಂದ ಓವರ್ ಟೇಕ್ ಮಾಡುವುದು ತಪ್ಪು ಎಂದರೆ ಸರಿ. ವಾಹನವು ಎಲ್ಲಿಂದ ಬಂದಿದ್ದು ಹಾಗೂ ಎಲ್ಲಿ ಅಪಘಾತವಾಗಿರುತ್ತದೆ ಎಂದು ಯಾರು ಸಹ ತೋರಿಸಿರುವುದಿಲ್ಲ. ನಾನು ಸದರಿ ಅಪಘಾತವನ್ನು ನೋಡಿರುವುದಿಲ್ಲ. ನಾಕಶೆಯನ್ನು ಯಾರು ಹಾಗೂ ಎಲ್ಲಿ ಬಿಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ವಾಹನವು ಎಲ್ಲಿ ಬಂದು ಓವರ್ ಟೇಕ್ ಮಾಡಿ ಅಪಘಾತವಾಗಿರುತ್ತದೆ ಎಂದು ಗೊತ್ತಿರುವುದಿಲ್ಲ. STOP ಅಂತ ಬರೆದಿರುವ ಪ್ರದೇಶವು ರಸ್ತೆಯ ಹೆಚ್ಚುವರಿ ಪ್ರದೇಶವಾಗಿರುತ್ತದೆ ಎಂದರೆ ಸರಿ. STOP ಅಂತ ಬರೆದಿರುವ ರಸ್ತೆ ಅಗಲ ಇದೆ ಮತ್ತು ಅಂಕೋಲಾ ಎಂದು ಬರೆದಿರುವ ರಸ್ತೆಯು ಚಿಕ್ಕದಾಗಿರುತ್ತದೆ ಎಂದರೆ ಸರಿ. ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಹಾಗೂ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಪೊಲೀಸರು ಪರಿಚಯ ಇದ್ದು, ಅವರ ಹೇಳಿಕೆಯ ಮೇರೆಗೆ ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿ. ಫೋಟೊಗಳನ್ನು ಪೊಲೀಸರು ತೆಗೆದಿದ್ದು, ಆದರೆ ಯಾವ ವಿಷಯಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಾನು ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.